ಅಸಲು ದಾವಾ ನಂ ಃ 46/2021
ಪಿ.ಡಬ್ಲ್ಯೂ ಃ 02

(ಇಂದು ದಿನಾಂಕಃ **23-12-2021** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಎಂ ವಿ ಪಿ ರವರಿಂದಃ-

ನನಗೆ ಸಾಕ್ಷ್ಯ ನುಡಿಯುವಂತೆ ನ್ಯಾಯಾಲಯದಿಂದ ಸಮನ್ಸ್ ಬಂದಿರುವುದಿಲ್ಲ. ವಾದಿ ನನ್ನನ್ನು ಸಾಕ್ಷ್ಯ ನುಡಿಯುವಂತೆ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ವಾದಿ ಹೇಳಿದಂತೆ ನಾನು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಲಕ್ಷ್ಮಣ ಗೌಡ ಅಡಿವೆಪ್ಪ ಪಾಟೀಲ್ ಎಂದು ತೋರಿಸಲು ಆಧಾರ ಕಾರ್ಡ್ ಹಾಜರು ಪಡಿಸಿರುವುದಿಲ್ಲ. ನನ್ನ ಸ್ವಂತ ಊರು ಯಕ್ಕಂಚಿ. ನಾನು ಸದರಿ ಊರಿನಲ್ಲಿ ಗೌಡಕಿ ಮಾಡುತ್ತೇನೆ. ಸಾಮಾನ್ಯವಾಗಿ ಊರಿನಲ್ಲಿ ಯಾವುದಾದರೂ ವ್ಯವಹಾರದಲ್ಲಿ ನಾನು ಭಾಗವಹಿಸುತ್ತೇನೆ ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುವ ಉದ್ಯೋಗ ಮಾಡುತ್ತೇನೆ ಎಂದರೆ ಸಾಕ್ಷಿ ಶೇತ್ಕಿ ಮಾಡುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣವನ್ನು ಹೊರತು ಪಡಿಸಿ ಬೇರೆ ಯಾವುದೇ ಪ್ರಕರಣದಲ್ಲಿ ನಾನು ಸಾಕ್ಷ್ಯ ನುಡಿದಿರುವುದಿಲ್ಲ. ನಾನು ಇದೇ ನ್ಯಾಯಾಲಯದಲ್ಲಿ ಮೂಲ ದಾವಾ ನಂ. **10/2020** ರಲ್ಲಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಊರಿನಲ್ಲಿ ಕೆಲವೊಂದು ವ್ಯವಹಾರದಲ್ಲಿ ಪಾಲ್ಗೊಂಡು ಹಣ ಪಡೆದು ಸಾಕ್ಷ್ಯ ನುಡಿಯುವ ಹವ್ಯಾಸ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಬೇಕಾದವರಿಗೆ ನಾನು ಸಾಕ್ಷ್ಯ ನುಡಿಯುತ್ತೇನೆ ಎಂದರೆ ಸರಿಯಲ್ಲ. ನಾನು ಶಾಲೆ ಕಲಿತಿಲ್ಲ. ದಾವಾ ಆಸ್ತಿ ಯಕ್ಕಂಚಿ ಗ್ರಾಮದಲ್ಲಿ ಇರುತ್ತದೆ. ಸದರಿ ಆಸ್ತಿಯ ಕ್ಷೇತ್ರ **12** ಎಕರೆ **35** ಗುಂಟೆ ಇರುತ್ತದೆ. ಸದರಿ ಆಸ್ತಿಯ ಸರ್ವೆ ನಂ. **54/1** ಇರುತ್ತದೆ. ಸದರಿ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸದರಿ ಜಮೀನಿಗೆ ನಾನು ಹೋಗಿರುತ್ತೇನೆ. ದಾವಾ ಆಸ್ತಿಯು ಯಕ್ಕಂಚಿ ಗ್ರಾಮದ ಪಶ್ಚಿಮ ದಿಕ್ಕಿಗೆ ಇರುತ್ತದೆ. ದಾವಾ ಆಸ್ತಿ ಸರ್ವೆ ನಂ. **54/1** ರಲ್ಲಿ ಕೆರೆ ಇರುತ್ತದೆ. ಸದರಿ ಆಸ್ತಿಯಲ್ಲಿ ಕಬ್ಬು ಇರುತ್ತದೆ ಎಂದರೆ ನೀರಾವರಿ ಇರುತ್ತದೆ ಎಂದು ನುಡಿಯುತ್ತಾರೆ.

ಸದರಿ ಆಸ್ತಿಯಲ್ಲಿ ಸಂಪೂರ್ಣವಾಗಿ ನೀರಾವರಿ ಬೆಳೆ ಬೆಳೆಯುತ್ತಾರೆ ಎಂದರೆ ಸಾಕ್ಷಿಯು ಬಾವಿ ಮತ್ತು ಬೋರ್ ವೆಲ್ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಿದ್ದಪ್ಪನವರಿಗೆ **70** ವರ್ಷ ವಯಸ್ಸಾಗಿರುತ್ತದೆ. ಸಿದದಪ್ಪನವರಿಗೆ ವಯಸ್ಸಾಗಿದ್ದು, ಸರಿಯಾಗಿ ಕಣ್ಣು ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಸಿದ್ದಪ್ಪರವರು ಒಂದೇ ಊರಿನವರಾಗಿದ್ದು, ಬಹಳಷ್ಟು ವರ್ಷಗಳಿಂದ ಪರಿಚಯ ಇರುತ್ತದೆ. ಸಿದ್ದಪ್ಪನವರ ಮನೆಯ ವ್ಯವಹಾರದಲ್ಲಿ ನಾನು ಪಾಲ್ಗೊಂಡಿರುವುದಿಲ್ಲ. ಸಿದ್ದಪ್ಪನವರ ಮನೆಗೆ ಹೋಗುವ ಪ್ರಸಂಗ ಬಂದಿರಲಿಲ್ಲ ಎಂದರೆ ಸಾಕ್ಷಿಯು ನಾನು ಕೆಲವೊಮ್ಮೆ ಹೋಗಿ ಬರುತ್ತಿದ್ದೆ ಎಂದು ನುಡಿಯುತ್ತಾರೆ. ಸಿದ್ದಪ್ಪನವರಿಗೆ ಪತ್ರಾಸ ಮನೆ ಇದ್ದು ಪೂರ್ವಕ್ಕೆ ಇರುತ್ತದೆ. ಸಿದ್ದಪ್ಪನವರ ಮನೆ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ವ್ಯವಹಾರದ ಮಾತುಕತೆಗೆ ನಾನು ಹೋಗಿದ್ದೆ. ನಾನು ಸದರಿ ವ್ಯವಹಾರಕ್ಕೆ ಸಿದ್ದಪ್ಪ ಐಗಳಿರವರ ಮನೆಗೆ ಹೋಗಿದ್ದೆನು. ಆ ಸಮಯದಲ್ಲಿ ಮಧ್ಯಾಹ್ನ **3.00** ಗಂಟೆ ಸಮಯ ಆಗಿತ್ತು. ಆ ಸಮಯದಲ್ಲಿ ರಾಮಪ್ಪ ಕಾಂಬಳೆ, ಸರದಾರ ಕಾಂಬಳೆ ಮತ್ತು ನಾನು ಹಾಜರಿದ್ದೆವು. ಆ ದಿನ **3,20,000/-** ರೂ.ಗಳಿಗೆ ಮಾತುಕತೆ ಆಗಿತ್ತು. ಅದೆ ದಿನ **1,90,000/-** ರೂ. ಗಳನ್ನು ಮುಂಗಡವಾಗಿ ನೀಡಲಾಗಿತ್ತು. ಆ ದಿನ ಆ ಬಗ್ಗೆ ಯಾವುದೇ ದಾಖಲೆ ಮಾಡಿಕೊಂಡಿರುವುದಿಲ್ಲ. ಆ ದಿನ ಸಿದ್ದಪ್ಪ ರವರ ಮಕ್ಕಳು ಇದ್ದರು. ಸಾಕ್ಷಿಯು ಮುಂದುವರೆದು ಐದು ಜನರು ಇದ್ದರು ಎಂದು ನುಡಿಯುತ್ತಾರೆ. ಸದರಿಯವರುಗಳೆಂದರೆ ಅಡಿವೆಪ್ಪ, ರಾಮು, ರಾಜು, ಮಹಾದೇವ ಮತ್ತು ಸುಶೀಲವ್ವ. **1,90,000/-** ರೂ. ಹಣವನ್ನು ನೀಡುವಾಗ **5.30** ರಿಂದ **6.00** ಗಂಟೆ ಸಮಯ ಆಗಿತ್ತು. ಆ ಸಮಯದಲ್ಲಿ ರೂ. **1,90,000/-** ಹಣ ನೀಡಿದ ಬಗ್ಗೆ ದಾಖಲೆ ಮಾಡಿಕೊಂಡಿರಲಿಲ್ಲ. ಆ ದಿನ ನಾನು ಸಿದ್ದಪ್ಪನ ಮನೆಗೆ ಹೋಗಿರಲಿಲ್ಲ ಮತ್ತು ಅವರಿಗೆ ರೂ. **1,90,000/-** ಹಣ ನೀಡಿರಲಿಲ್ಲ ಎಂದರೆ ಸರಿಯಲ್ಲ. ಸಿದ್ದಪ್ಪನವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದು ಅವರು ಯಾವತ್ತೂ ಸಹ ಆಸ್ತಿಯನ್ನು ಮಾರಾಟ ಮಾಡಲು ಇಟ್ಟಿರಲಿಲ್ಲ ಎಂದರೆ ಸರಿಯಲ್ಲ.

ಆ ಸಮಯದಲ್ಲಿ ಅವರ ಮಕ್ಕಳು ಸಹ ಇರಲಿಲ್ಲ, ಆದರೂ ಸಹ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಾಂಬಳೆ ಮತ್ತು ವಾದಿ ಸೇರಿ ಸಿದ್ದಪ್ಪ ನರವರ ಕಡೆಯಿಂದ ಖೊಟ್ಟಿ ದಾಖಲೆಗೆ ಸಹಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಿದ್ದಪ್ಪರವರನ್ನು ನಾನು ಉಪನೋಂದಣಾಧಿಕಾರಿಗಳ ಕಛೇರಿಗೆ ದಿಃ **12-09-2017** ರಂದು ಕರೆದುಕೊಂಡು ಹೋಗಿರುತ್ತೇವೆ. ನನ್ನನ್ನು ಸಿದ್ದಪ್ಪರವರು ಉಪನೋಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿರುತ್ತಾರೆ. ಸಿದ್ದಪ್ಪರವರು ನನ್ನ ನ್ನು ಖರೀದಿ ಪತ್ರ ಬರೆಯಲು ಕರೆದುಕೊಂಡು ಹೋಗಿರುತ್ತಾರೆ. ರಮೇಶ್ ಕುಲಕರ್ಣಿ ರವರ ಕಛೇರಿಗೆ ಕರೆದುಕೊಂಡು ಹೋಗಿದ್ದರು. ಸಿದ್ದಪ್ಪರವರು ನನ್ನನ್ನು ಕರೆದುಕೊಂಡು ಹೋಗಿರಲಿಲ್ಲ, ವಾದಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾಳೆ ಖರೀದಿ ಕರಾರು ಪತ್ರ ಬರೆಯುವುದು ಇರುತ್ತದೆ ಎಂದು ನನಗೆ ಹೇಳಿದ್ದರು. ಆ ದಿನ ಹಣವನ್ನು ಸಿದ್ದಪ್ಪರವರಿಗೆ ನೀಡಿರಲಿಲ್ಲ, ಆದರೆ ಮಾತುಕತೆಯ ದಿನ ಹಣ ನೀಡಲಾಗಿತ್ತು. ಸಿದ್ದಪ್ಪನವರ ಮಕ್ಕಳು ಖರೀದಿ ಕರಾರು ಪತ್ರಕ್ಕೆ ಸಹಿ ಮಾಡಿರಲಿಲ್ಲ, ಸಿದ್ದಪ್ಪರವರು ಎರಡು ಸಾಕ್ಷಿದಾರರು ಸಾಕು ಎಂದು ಹೇಳಿದ್ದರು. ಖರೀದಿ ಕರಾರು ಪತ್ರದ ಕಾಲಕ್ಕೆ ಸಿದ್ದಪ್ಪರವರ ಮಕ್ಕಳು ಬಂದಿರಲಿಲ್ಲ ಎಂದರೆ ಸಾಕ್ಷಿಯು ಐದು ಜನರು ಬಂದಿದ್ದರು ಎಂದು ನುಡಿಯುತ್ತಾರೆ. ಸಿದ್ದಪ್ಪನವರ ಮಕ್ಕಳಿಗೆ ಗೊತ್ತಿಲ್ಲದೇ ಸಿದ್ದಪ್ಪನವರನ್ನು ಕರೆದುಕೊಂಡು ಹೋಗಿ ಖೊಟ್ಟಿ ಪತ್ರವನ್ನು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ಸಿದ್ದಪ್ಪನವರು ಈಗ ತೀರಿಕೊಂಡಿರುತ್ತಾರೆ. ಸಿದ್ದಪ್ಪನವರು ಆರಾಮ ಇಲ್ಲದೆ ಖರೀದಿ ಕರಾರು ಆದ ನಂತರ ತೀರಿಕೊಂಡಿರುತ್ತಾರೆ. ಸಿದ್ದಪ್ಪನವರಿಗೆ ಲಕ್ವ ಹೊಡೆದಿರಲಿಲ್ಲ. ಸಿದ್ದಪ್ಪರವರಿಗೆ ಲಕ್ವ ಹೊಡೆದಿದ್ದು, ಅದರ ಗೈರು ಫಾಯಿದೆಯನ್ನು ಪಡೆದುಕೊಂಡು ಖೊಟ್ಟಿ ದಾಖಲೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಸಿದ್ದಪ್ಪರವರ ಮೇಲೆ ಈ ದಾವೆಯನ್ನು ದಾಖಲಿಸಿರುತ್ತಾರೆ. ವಾದಿ ಸಿದ್ದಪ್ಪರವರು ಜೀವಂತ ಇರುವ ಸಮಯದಲ್ಲಿ ದಾವೆಯನ್ನು ದಾಖಲಿಸಿರುತ್ತಾರೆ.

ಯಕ್ಕಂಚಿಯಲ್ಲಿ ನನ್ನ ಜಮೀನು ಇರುತ್ತದೆ. ನನ್ನ ಜಮೀನಿನ ಸರ್ವೆ ನಂಬರ್ ನೆನಪಿಲ್ಲ. ದಾವಾ ಆಸ್ತಿಯಿಂದ ನನ್ನ ಜಮೀನು ½ ಕಿ.ಮೀ. ದೂರ ಇರುತ್ತದೆ. ನನ್ನ ಜಮೀನಿನ ಆಜು ಬಾಜು ನೀರಾವರಿ ಜಮೀನುಗಳು ಇರುತ್ತವೆ. ನನ್ನ ಜಮೀನಿನ ಆಜು ಬಾಜು ಬೋರ್ ವೆಲ್ ಮತ್ತು ಬಾವಿ ಇರುತ್ತವೆ. ಯಕ್ಕಂಚಿ ಗ್ರಾಮದಲ್ಲಿ ನೀರಾವರಿ ಜಮೀನಿಗೆ **20,00,000/-** ರೂ. ಮೌಲ್ಯ ಇರುತ್ತದೆ. ದಾವಾ ಆಸ್ತಿಯ ಬಾಜುವಿಗೆ ಕೆರೆ ಇರುತ್ತದೆ. ಕೆರೆ ಇರುವುದರಿಂದ ದಾವಾ ಆಸ್ತಿಯು ನೀರಾವರಿ ಜಮೀನು ಆಗಿರುತ್ತದೆ ಎಂದರೆ ಸಾಕ್ಷಿಯು ಕೆರೆ ಸಣ್ಣದು ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ **25-30** ಲಕ್ಷ ರೂ. ಮೌಲ್ಯ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯು ಮಡ್ಡಿ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಮಡ್ಡಿ ಜಮೀನು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯಲ್ಲಿ ಪ್ರಸ್ತುತ ಕಬ್ಬಿನ ಬೆಳೆ ಇರುತ್ತದೆ ಎಂದರೆ ಸರಿಯಲ್ಲ. ಸಿದ್ದಪ್ಪರವರ ಸಹಿಯನ್ನು ಖಾಲಿ ಹಾಳೆಯ ಮೇಲೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಿದ್ದಪ್ಪರವರೇ ಮಾಹಿತಿಯನ್ನು ನೀಡಿ ಖರೀದಿ ಕರಾರು ಪತ್ರವನ್ನು ಬರೆಸಿರುತ್ತಾರೆ. ವಾದಿ ನನಗೆ ಸಂಬಂಧಿಕನಲ್ಲ. ವಾದಿ ನನಗೆ ಪರಿಚಯ ಇಲ್ಲ, ರಾಮಪ್ಪ ಕಾಂಬಳೆ ನನಗೆ ಪರಿಚಯ ಇರತ್ತದೆ. ಸಿದ್ದಪ್ಪರವರಿಗೆ ಮೋಸ ಮಾಡಿ ಖೊಟ್ಟಿ ಕಾಗದ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ಯಾವುದೇ ಹಣವನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. ಸಿದ್ದಪ್ಪರವರು ಯಾವತ್ತೂ ಸಹ ಜಮೀನನ್ನು ಮಾರಾಟ ಮಾಡುತ್ತೆನೆ ಎಂದು ಹೇಳಿರಲಿಲ್ಲ ಮತ್ತು ಅವರನ್ನು ಪುಸಲಾಯಿಸಿ ಕರೆದುಕೂಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲಾ.

(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ. ಇದೆ

(ನಾಗೇಂದ್ರ)
**3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ. ಎಂ. ಎಫ್. ಸಿ. ನ್ಯಾಯಾಲಯ ಅಥಣಿ.**